# ವೀರೇಶ ಚರಿತೆ

**ಡಾ. ವಾಣಿಶ್ರೀ ಬಿ. ಎಂ**

ಸಹಾಯಕ ಪ್ರಾಧ್ಯಾಪಕರು

ಎಮ್. ಇ. ಎಸ್. ಕಲೆ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

ಮಲ್ಲೇಶ್ವರಂ, ಬೆಂಗಳೂರು–೫೬೦೦೦೩

girishree_vani@rediffmail.com

ಸಾಹಿತ್ಯ ಸೃಷ್ಟಿ ಮನುಷ್ಯನ ಮಾನಸಿಕತೆಗೆ ಸಂಬಂಧಿಸಿದ್ದು. ಭಾಷಾ ವಿಜ್ಞಾನಿಗಳ ಪ್ರಕಾರ ಜೀವಂತ ಭಾಷೆಯು ಕಾಲ ಕಾಲಕ್ಕೆ ಸ್ಥಿತ್ಯಂತರ ಹೊಂದುತ್ತಾ ಹೋಗುತ್ತದೆ. ಕನ್ನಡ ಭಾಷೆಯೂ ಈ ಹೇಳಿಕೆಗೆ ಹೊರತಲ್ಲ. ಅದು ಕಾಲಾನುಗುಣವಾಗಿ ಬದಲಾವಣೆ ಹೊಂದುತ್ತಾ ವಿಶಿಷ್ಟ ಘಟ್ಟಗಳನ್ನೇ ನಿರ್ಮಿಸಿದೆ. ಮೂಲ ದ್ರಾವಿಡ ಭಾಷೆಯಿಂದ ಕವಲೊಡೆದು ಸುಮಾರು ಕ್ರಿ.ಶ ೪೫೦ಕ್ಕೆ ಕೆಲವು ಶತಮಾನಗಳ ಹಿಂದಿನಿಂದಲೇ ಸ್ವತಂತ್ರವಾಗುತ್ತಾ, ಸ್ವತಂತ್ರ ವರ್ಣಮಾಲೆ ನಿರ್ಮಾಣವಾಯಿತು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪೂರ್ವದ ಹಳಗನ್ನಡ, ನಡುಗನ್ನಡ, ಹೊಸಗನ್ನಡ, ಎಂಬ ಘಟ್ಟಗಳನ್ನು ಗುರುತಿಸಬಹುದು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಜರಾಮರವಾಗಿ ಉಳಿದಿರುವ ಅನೇಕ ಕವಿಗಳಿದ್ದಾರೆ. ಪಂಪನಿಂದ ಆರಂಭಿಸಿ ಹಲವಾರು ಕವಿಗಳು ಕನ್ನಡ ಸಾಹಿತ್ಯ ಭಂಡಾರವನ್ನು ಶ್ರೀಮಂತಗೊಳಿಸಿದ್ದಾರೆ. ಮೊದಲಿಗೆ ಚಂಪೂವಿನಲ್ಲಿ ಬರೆದ ಕವಿಗಳು, ಕಾಲಮಾನದ ಅಗತ್ಯಗಳಿಗೆ ತಕ್ಕಂತೆ ಬೇರೆ ಬೇರೆ ಛಂದಸ್ಸುಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಗಿರಿಜಾಕಲ್ಯಾಣ ಎಂಬ ಪ್ರೌಢ ಕೃತಿಯನ್ನು ರಚಿಸಿದ ಹರಿಹರನು ರಗಳೆ ಛಂದಸ್ಸನ್ನು ಬಳಸಿ 'ರಗಳೆ ಕವಿ' ಎಂದು ಹೆಸರಾದವನು. ನಂತರ ನಡುಗನ್ನಡ ಸಂದರ್ಭದಲ್ಲಿ ಕವಿಗಳು ಹೆಚ್ಚಾಗಿ ಷಟ್ಪದಿಗಳನ್ನ ಬಳಸುತ್ತಾರೆ. 'ಷಟ್ಪದಿಯ ಬ್ರಹ್ಮ' ಎಂದು ಘನತೆವೆತ್ತವನು ರಾಘವಾಂಕ. ನಡುಗನ್ನಡದ ಸಂದರ್ಭದಲ್ಲಿ ರಗಳೆ, ಸಾಂಗತ್ಯ, ಮೊದಲಾದ ದೇಸೀ ಸ್ವತಂತ್ರ ಮನೋಧರ್ಮದ ಕೃತಿಗಳು ರಚನೆಯಾದವು. ರಾಘವಾಂಕನು ಪ್ರಯೋಗಶೀಲ ಕವಿಯಾಗಿ ಷಟ್ಪದಿಯನ್ನು ವ್ಯಾಪಕವಾಗಿ ಬಳಸಿ ಹೊಸ ಮಾರ್ಗ ತೋರಿದನು.

**ರಾಘವಾಂಕ :** ಇಂದಿನ ಬಳ್ಳಾರಿ ಜಿಲ್ಲೆಯನ್ನು ಹಿಂದೆ ಕುಂತಳದೇಶ ಎನ್ನಲಾಗುತ್ತಿತ್ತು. ಹಂಪಿಯು ಹೆಮ್ಮೆಯ ವಿಜಯನಗರ ಸಾಮ್ರಾಜ್ಯದ ರಾಜಧಾನಿ. ತುಂಗಭದ್ರಾ ನದೀತೀರದ ಇದು ಪಂಪಾಪುರ, ಪಂಪಾಕ್ಷೇತ್ರ ಎಂದೂ ಹೆಸರಾಗಿತ್ತು. ರಾಘವಾಂಕ ಹುಟ್ಟಿದುದು ಇಲ್ಲಿಯೇ. ತಂದೆ ಮಹದೇವಭಟ್ಟ, ತಾಯಿ ರುದ್ರಾಣಿ, ಸೋದರಮಾವ ಗುರು ಕವಿ ಚಕ್ರವರ್ತಿ ಹರೀಶ್ವರ/ಹರಿಹರ. ಹರಿಹರ ರಾಘವಾಂಕನಿಗೆ ವಿದ್ಯಾಗುರು, ದೀಕ್ಷಾ ಗುರುವೂ ಹೌದು. ಹರಿಹರನ ಗುರುಕುಲದಲ್ಲೇ ರಾಘವಾಂಕನ ವಿದ್ಯಾಭ್ಯಾಸವಾಯಿತು. ರಾಘವಾಂಕನು ಪಂಪಾಪುರದ ರಾಜನ ಸಭೆಯಲ್ಲಿ ಹರಿಶ್ಚಂದ್ರ ಕಾವ್ಯವನ್ನು ರಚಿಸಿ ವಾಚಿಸಿದನು. ಆ ಕೃತಿಯು ವಿದ್ವಾಂಸರೆಲ್ಲರ ಪ್ರಶಂಸೆಗೆ ಪಾತ್ರವಾಯಿತು. ಆದರೆ ಹರಿಹರನಿಗೆ ನರ ಸ್ತುತಿ ಮಾಡಿದ ಸೋದರಳಿಯನ ಮೇಲೆ ಅತೀವ ಕೋಪವುಂಟಾಯಿತು. ಹರೀಶ್ವರನು ಶಿಷ್ಯನ ಹಲ್ಲು ಮುರಿಯುವಂತೆ ಬಾರಿಸಿದನು. ನಂತರ ಹರಿಹರನ ಆಜ್ಞೆಯಂತೆ ಸೋಮನಾಥ ಚರಿತೆ, ವೀರೇಶ ಚರಿತೆ ಮೊದಲಾದ ಗ್ರಂಥಗಳನ್ನು ಬರೆದು ಹಲ್ಲುಗಳನ್ನು ಮರಳಿ

DOI: 10.59176

ಪಡೆದನೆಂಬ ದಂತಕಥೆ ಪ್ರಚಲಿತದಲ್ಲಿದೆ. ರಾಘವಾಂಕನು ಹೊಯ್ಸಳ ನರಸಿಂಹ ಬಲ್ಲಾಳನ ಮಂತ್ರಿ ಕೆರೆಯ ಪದ್ಮರಸರನ್ನು ಸಂದರ್ಶಿಸಿ ಹಂಪಿಗೆ ಬಂದನು. ಓರುಂಗಲ್ಲಿನ ರಾಜ ರುದ್ರಪ್ರತಾಪನ ಸಭೆಯಲ್ಲಿದ್ದ ಏಕಸಂಧಿ, ದ್ವಿಸಂಧಿ ಹಾಗೂ ತ್ರಿಸಂಧಿ ಗ್ರಾಹಿಗಳೆಂಬ ಕುಕವಿಗಳನ್ನು ತನ್ನ ಷಟ್ಪದಿ ರೂಪದ ವೀರೇಶ್ವರ ಚರಿತೆಯನ್ನು ಮಂಡಿಸಿ ಅವರನ್ನು ಜಯಿಸಿ ಹಂಪೆಗೆ ಮರಳಿದನು. 'ಕವಿ ಶರಭ ಬೇರುಂಡ', 'ಕವಿ ಕಮಲ ಮಾರ್ತಾಂಡ', 'ಉಭಯಕವಿ ಕಮಲರವಿ' ಎಂಬ ಬಿರುದುಗಳನ್ನು ಪಡೆದ ರಾಘವಾಂಕನು ಹರಿಶ್ಚಂದ್ರ ಕಾವ್ಯ, ಸಿದ್ಧರಾಮ ಪುರಾಣ, ಸೋಮನಾಥ ಚರಿತೆ, ವೀರೇಶ ಚರಿತೆ, ಶರಭ ಚಾರಿತ್ರ್ಯ, ಹರಿಹರ ಮಹತ್ವ ಕೃತಿಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ಕೊನೆಯ ಎರಡು ಕೃತಿಗಳು ಉಪಲಬ್ಧವಿಲ್ಲವೆಂಬ ಹೇಳಿಕೆಯಿತ್ತು. ಆದರೆ ಇತ್ತೀಚೆಗೆ ಜುಲೈ ೨೦೧೩ ರಲ್ಲಿ ಮೈಸೂರು ಊಟಿ ರಸ್ತೆಯ ಜೆ ಎಸ್ ಎಸ್ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಗೌರವ ಪ್ರಾಧ್ಯಾಪಕ ಜಗಲೂರು ಎಂ ವೀರಭದ್ರಸ್ವಾಮಿ ಅವರು ಶರಭ ಚಾರಿತ್ರ್ಯ ಮತ್ತು ಹರಿಹರ ಮಹತ್ವ ಕೃತಿಗಳ ಆರು ಸಮಗ್ರ ಉಲ್ಲೇಖಗಳನ್ನು ಬೆಳಕಿಗೆ ತರುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ವರದಿಯಾಗಿದೆ.

ಉಭಯ ಕವಿ ರಾಘವಾಂಕನು 'ಷಟ್ಪದಿಯ ಬ್ರಹ್ಮ' ಎಂದು ವೀರಶೈವ ಗ್ರಂಥಗಳಲ್ಲಿ ಉಲ್ಲೇಖವಿದೆ. ಆದರೆ ಅವನಿಗಿಂತಲೂ ಹಿಂದಿನ ಕವಿಗಳು ಷಟ್ಪದಿಗಳನ್ನು ಬಳಸಿದ ಉದಾಹರಣೆಗಳಿವೆ. ರಾಘವಾಂಕನಿಗಿಂತ ಪೂರ್ವದಲ್ಲಿ ಷಟ್ಪದೀ ಕಾವ್ಯಗಳು ಇದ್ದ ಆಧಾರಗಳು ದೊರೆತಿಲ್ಲ. ಷಟ್ಪದಿಗಳು ಮಾತ್ರ ಜನರ ಬಾಯಲ್ಲಿದ್ದವು. ೧೨ನೆಯ ಶತಮಾನದ ಜಯದೇವಕವಿ ಗೀತಗೋವಿಂದದಲ್ಲಿ ಶರ ಕುಸುಮ ಷಟ್ಪದಿಯನ್ನು ಬಳಸಿರುವುದು ತಿಳಿದುಬರುತ್ತದೆ. "ಚಂದ್ರರಾಜನು (ಸು–೧೦೭೯) ತನ್ನ ಕೃತಿ ಮದನತಿಲಕದಲ್ಲಿ ಶರ ಷಟ್ಪದಿಯನ್ನು ಹೇಳಿದ್ದಾನೆ. ಚೆನ್ನಬಸವಣ್ಣನವರು ಕುಸುಮ, ಭೋಗ ಷಟ್ಪದಿಗಳನ್ನು ಉಪಯೋಗಿಸಿದ್ದಾರೆ. ಪರಿವರ್ಧಿನೀ ಷಟ್ಪದಿಯೂ ಆಗ ವ್ಯವಹಾರದಲ್ಲಿದ್ದಂತೆ ತೋರುತ್ತದೆ".[೧]

ಚಂದ್ರರಾಜನಿಂದ ರಾಘವಾಂಕನವರೆಗೆ ಸುಮಾರು ೧೨೦ ವರ್ಷಗಳಲ್ಲಿ ಷಟ್ಪದಿಗಳು ವಿಕಾಸಗೊಂಡಿವೆ. ವಾರ್ಧಕ ಷಟ್ಪದಿಯ ಮೊದಲ ಕವಿ ರಾಘವಾಂಕನೆಂದು ಹೇಳಬಹುದು ಎಂಬುದು ವಿದ್ವಾಂಸರ ಅಭಿಪ್ರಾಯ."ರಾಘವಾಂಕನು ಷಟ್ಪದಿ ನಿರ್ಮಾಪಕನೆಂದು ಹೇಳಲಾಗದಿದ್ದರೂ ಷಟ್ಪದಿ ಸಂಪ್ರದಾಯ ಸ್ಥಾಪಕನೆಂದು ಹೇಳಬಹುದು."[೨] ಪ್ರೌಢ ಕವಿಗಳು ಹೊಸ ಪ್ರಯೋಗಗಳನ್ನು ಹೊಸ ರೂಪಗಳನ್ನು ಪ್ರಚಾರ ಮಾಡಿದಂತೆಲ್ಲ ಭಾಷೆ ಬೆಳೆಯುತ್ತದೆ. ಷಟ್ಪದಿ ಸಾಹಿತ್ಯ ವಿಚಾರದಲ್ಲಿ ರಾಘವಾಂಕನಿಗೆ ದೊಡ್ಡ ಗೌರವ ಸಲ್ಲತಕ್ಕದ್ದಾಗಿದೆ. ೧೧ನೆಯ ಶತಮಾನದ ಶಾಸನಗಳಲ್ಲಿ ಷಟ್ಪದಿಗಳು ದೊರೆತಿರುವ ಉದಾಹರಣೆಗಳಿವೆ. ಈ ವಿಚಾರವನ್ನು ಕುರಿತಂತೆ ಹೆಚ್ಚಿನ ಸಂಶೋಧನೆಯ ಅಗತ್ಯವಿದೆ.

ಷಟ್ಪದಿಗಳಲ್ಲಿ ಹೆಚ್ಚು ಬಳಕೆಯಾಗಿರುವುದೆಂದರೆ ಭಾಮಿನೀ ಷಟ್ಪದಿ ಮತ್ತು ವಾರ್ಧಕ ಷಟ್ಪದಿ. ಕುಸುಮ ಷಟ್ಪದಿಯಲ್ಲಿ ೨೪೭೯ ಪದ್ಯಗಳ ಕಾವ್ಯ ಶ್ರೀರಾಮಕಥಾಮೃತ. ಹರಿದಾಸ ಮಹಿಳೆ ಶ್ರೀಮತಿ. ಅಂಬಾಬಾಯಿಯವರು ಬರೆದಿರುವ ಈ ಮಹಾ ಕಾವ್ಯ ಕುಸುಮ ಷಟ್ಪದಿಯಲ್ಲಿದ್ದು ೧೯–೦೨–೧೯೩೫ರಲ್ಲಿ ಕೇವಲ ಎರಡೂವರೆ ತಿಂಗಳಲ್ಲಿ ರಚನೆಯಾಗಿದ್ದು ೨೦೧೮ ರಲ್ಲಿ ಪ್ರಕಟಗೊಂಡಿದೆ.

DOI: 10.59176

ಷಟ್ಪದಿ ಕನ್ನಡ ಭಾಷೆಯಲ್ಲಷ್ಟೇ ಕಂಡುಬರುವ ಬಂಧ. ಅದನ್ನು ಹಾಡುಗಳಲ್ಲಿ ಬಳಸಬಹುದಾದ ಬಂಧ. ಆದಿ ಪ್ರಾಸವಿದ್ದು ತಾಳದ ನಿಯಮಕ್ಕೆ ಇದು ಬದ್ಧವಾಗಿರುವುದಿಲ್ಲ. ಅನುಪ್ರಾಸದಂತಹ ಪದ ಮೈತ್ರಿಯಿಂದ ಕೇಳಲು ಸುಂದರವಾಗಿರುತ್ತದೆ. ಕಥೆಯು ಕಾವ್ಯ ವಸ್ತುವಾಗಿದ್ದರೆ. ಅದನ್ನು ಹೇಳಲು ಷಟ್ಪದಿ ಉತ್ತಮ ಬಂಧ. ಪ್ರಾಚೀನವಾದ ಮಾನಸೋಲ್ಲಾಸದಲ್ಲಿಯೂ ಇದನ್ನು ಗೇಯ ಪ್ರಬಂಧವೆಂಬಂತೆ ವಿವರಿಸಲಾಗಿದೆ. "ಶಾರ್ಙ್ಗದೇವನು ತ್ರಿಪದಿ ಷಟ್ಪದಿಗಳೆರಡನ್ನು ಗೇಯಪ್ರಬಂಧಗಳಾಗಿ ಗ್ರಹಿಸಿ ಅವುಗಳ ಗಾಯನ ವಿಧಾನವನ್ನು ಸಂಗೀತ ಶಾಸ್ತ್ರದ ಪರಿಭಾಷೆಯಲ್ಲಿ ವಿವರಿಸಿದ್ದಾನೆ".[೩] ಮೊದಲಿಗೆ ಷಟ್ಪದಿಗಳು ಅಂಶ ಷಟ್ಪದಿಗಳು ೧೨ನೆಯ ಶತಮಾನದ ಮಧ್ಯಭಾಗದಿಂದ ಅಂಶ ಷಟ್ಪದಿಗಳು ಮಾತ್ರಾಗಣ ಷಟ್ಪದಿಗಳಾಗಿ ಬದಲಾದವು. ರಾಘವಾಂಕನಿಗಿಂತ ಹಿಂದೆ ಪೋಲಾಳ್ವ ದಂಡನಾಥ (೧೨೨೪) ಎಂಬ ಕವಿ ಷಟ್ಪದಿಯಲ್ಲಿ ರಚನೆ ಮಾಡಿರುವುದಾಗಿ ತಿಳಿದು ಬರುತ್ತದೆ. ನಂತರ ಕುಮುದೇಂದು ಮೊದಲಾದವರು ಮಾತ್ರಾ ಷಟ್ಪದಿಯ ಆದ್ಯ ಕೃಷಿಕರಾದರು.

ಛಂದೋಬುಧಿಯಲ್ಲಿ ನಾಗವರ್ಮ ಹೇಳಿರುವುದು ಅಂಶಗಣ ಷಟ್ಪದಿಗಳನ್ನು. ಮಾತ್ರಾಗಣ ಷಟ್ಪದಿಗಳ ಮೊದಲ ಪ್ರಸ್ತಾಪ ಗುಣಚಂದ್ರನ ಛಂದಸ್ಸಾರದಲ್ಲಿ ಬರುತ್ತದೆ. ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ ಎಂಬ ೬ ವಿಧದ ಷಟ್ಪದಿಗಳಿವೆ. ವಾರ್ಧಕವನ್ನು ಬಳಸಿದವರಲ್ಲಿ ರಾಘವಾಂಕ ಹಾಗೂ ಲಕ್ಷ್ಮೀಶ ಇವರೇ ಅಗ್ರಗಣ್ಯರು. ಷಟ್ಪದಿಯ ಆದ್ಯನೆಂದು ಹೆಸರಾದ ರಾಘವಾಂಕ ಉದ್ದಂಡ ಷಟ್ಪದಿಯನ್ನು ಬಳಸಿ ವೀರೇಶ ಚರಿತೆಯನ್ನು ರಚಿಸಿದ್ದಾನೆ. "ಛಂದೋಗ್ರಂಥಗಳಲ್ಲಿ ಎಲ್ಲಿಯೂ ಇದರ ಲಕ್ಷಣಗಳನ್ನು ವಿವರಿಸಿಲ್ಲ. ಇದು ವಾರ್ಧಕದ ಒಂದು ಬೇಧವೇ ಆಗಿರುವುದು".[೪] ರಾಘವಾಂಕ ತತ್ವ ವಿವೇಚನೆಗೆ ಚರಿತ್ರೆ ಬರೆಯ ಹೊರಟವನಲ್ಲ. ತನ್ನ ಕಾಲದ ಪೌರಾಣಿಕ ಕಥೆಯನ್ನು ಕಾವ್ಯ, ಕಥನ ಕ್ರಮ, ಪಾತ್ರಗಳ ಪ್ರದರ್ಶನ, ಸಹಜವಾದ ಸಂಭಾಷಣೆ, ಭಾವ ಪ್ರಪಂಚ, ಖಚಿತ ವರ್ಣನೆ, ಜೀವನ ವಿಮರ್ಶೆ, ಭಾಷೆ ಶೈಲಿಗಳನ್ನು ಅತಿಶಯವಾಗಿ **ಬಳಕೆ** ಮಾಡಿದ್ದಾನೆ. ವೀರೇಶ ಚರಿತೆಯಲ್ಲಿ ರಾಘವಾಂಕ ಬಳಸಿರುವ ಉದ್ದಂಡ ಷಟ್ಪದಿ ವಿಶಿಷ್ಟವಾದುದು. ಉದ್ದಂಡ ಷಟ್ಪದಿ ವಾರ್ಧಕವನ್ನು ಹೋಲುತ್ತದೆ ಆದರೆ ಅದರ ಗಣ ವಿಭಜನೆ ಬೇರೆ ರೀತಿಯದಾಗಿದೆ. ವಾರ್ಧಕದಲ್ಲಿ ೫ ಮಾತ್ರೆಗಳ ಗಣವಿನ್ಯಾಸ, ಇದರಲ್ಲಿ ೪ ಮಾತ್ರೆಗಳ ಗಣವಿನ್ಯಾಸ. "ಈ ಮೊದಲು ಬಳಕೆಯಲ್ಲಿದ್ದಿರಬಹುದಾದ ಷಟ್ಪದಿಗಳಿಗಿಂತ ಬೇರೆಯಾದ ಈ ಷಟ್ಪದಿಯನ್ನು ಪ್ರಯೋಗ ಕುತೂಹಲದಿಂದಾಗಿಯೋ, ವೈವಿಧ್ಯ ವಿಸ್ತರಣೆಗಾಗಿಯೋ ರಾಘವಾಂಕನು ಕೈಗೊಂಡಿರಬೇಕು".[೫] ರಾಘವಾಂಕ, ಬಸವಾಂಕರ ನಂತರ ಇದರ ಪ್ರಯೋಗ ಆಗಿಲ್ಲ. ಉದ್ದಂಡ ಎಂದರೆ (ಮನಸೋ ಇಚ್ಛೆ ವರ್ತಿಸುವ) ಎಂಬ ಅರ್ಥವಿದೆ. ಇದು ಇತರ ಷಟ್ಪದಿಗಳಂತೆ ಇಲ್ಲ. ವಿಶಿಷ್ಟ ಗಣ ರಚನೆಯಿಂದಾಗಿ "ರಾಗಾಲಾಪಕ್ಕೆ ಉದ್ದಂಡ ಷಟ್ಪದಿಯಲ್ಲಿ ಆಸ್ಪದವಿಲ್ಲ; ಅದು ಗಣದಿಂದ ಗಣಕ್ಕೆ ಒಂದೇ ಸಮನೆ ಉದ್ದಂಡವಾಗಿ ಉರುಳುತ್ತಾ ಹೋಗುತ್ತದೆ".[೬] ಇದರಲ್ಲಿ ಇತರ ಷಟ್ಪದಿಗಳಿಗಿಂತ ಅಧಿಕ (ಆರು) ಮಾತ್ರೆಯ ಗಣವಿದೆ. ಆದ್ದರಿಂದ ಉದ್ದಂಡ ನೀಳವಾದ ಎನ್ನಬಹುದು. ವೀರಭದ್ರನಿಗೆ ಉದ್ದಂಡ ಎಂಬ ಹೆಸರಿದೆ. ಈ ಕಥೆಯ ವಸ್ತು ವೀರಭದ್ರನ ಕಥೆಯಾಗಿರುವುದರಿಂದ ಉದ್ದಂಡ ಷಟ್ಪದಿ ಬಳಸಿರಬಹುದೆಂಬುದು ಬಿ. ಶಿವಮೂರ್ತಿ ಶಾಸ್ತ್ರಿಗಳ ಅಭಿಪ್ರಾಯ.

DOI: 10.59176
http://www.kristujayantijournal.com/index.php/KJKSP

**ವಾರ್ಧಕ ಮತ್ತು ಉದ್ದಂಡ ಷಟ್ಪದಿ:**

ವಾರ್ಧಕದಲ್ಲಿ ೧,೨,೪,೫ ನೆಯ ಸಾಲುಗಳಲ್ಲಿ ೫ ಮಾತ್ರೆಯ ೪ ಗಣಗಳು ೩-೬ ನೇ ಸಾಲಿನಲ್ಲಿ ೫ ಮಾತ್ರೆಯ ೬ ಗಣಗಳು ಹಾಗೂ ೧ ಗುರು ಇರುತ್ತದೆ.

ಉದ್ದಂಡ ಷಟ್ಪದಿಯಲ್ಲಿ ೧,೨,೪,೫ ನೆಯ ಸಾಲುಗಳಲ್ಲಿ ೪ ಮಾತ್ರೆಯ ೫ ಗಣಗಳು ೩, ೬ ನೆಯ ಸಾಲುಗಳಲ್ಲಿ ೪ ಮಾತ್ರೆಯ ೮ ಗಣಗಳು ಇರುತ್ತವೆ. ಆದರೆ ಗುರು ಇರುವುದಿಲ್ಲ. ಮಾತ್ರೆಗಳಲ್ಲಿ ಸಮವೆನಿಸಿದರೂ ಗಣ ವಿಭಾಗದಲ್ಲಿ ಬೇರೆಯಾಗಿದೆ. ವಾರ್ಧಕವು ರಾಗ ಪ್ರಧಾನವಾದರೆ, ಉದ್ದಂಡವು ತಾಳ ಪ್ರಧಾನವಾಗಿದೆ. ರಾಘವಾಂಕನ ನಂತರ ಕವಿ ಚಿಕ್ಕನಂಜಾಚಾರ್ಯನನ್ನು ಬಿಟ್ಟರೆ ಇನ್ನಾರೂ ಉದ್ದಂಡ ಷಟ್ಪದಿಯನ್ನು ಬಳಸಿಲ್ಲ.

**ವೀರೇಶ ಚರಿತೆ:**

ವೀರೇಶ ಚರಿತೆಗೆ ಆಕರ ಗ್ರಂಥ ಹರಿಹರನ ರಘಟಾ ಬಂಧದಲ್ಲಿರುವ ವೀರಭದ್ರದೇವರ ರಗಳೆ. ಲಲಿತ ರಗಳೆಯಲ್ಲಿನ ಹರಿಹರನ ಕೃತಿಯನ್ನು ರಾಘವಾಂಕ ಉದ್ದಂಡ ಷಟ್ಪದಿಯಲ್ಲಿ ಬರೆದಿದ್ದಾನೆ. ಇದು ಪ್ರಾಚೀನ ಕವಿಗಳ ಖಂಡಕಾವ್ಯಕ್ಕೆ ಒಂದು ಉತ್ತಮ ಉದಾಹರಣೆ. ಈ ಕಾವ್ಯದಲ್ಲಿ ೨ ಸಂಧಿಗಳು ೧೨೭ ಪದ್ಯಗಳಿವೆ. ಶಿವನನ್ನು ತಿರಸ್ಕರಿಸಿ ಯಾಗ ಮಾಡುತ್ತಿದ್ದ ದಕ್ಷ ಪ್ರಜಾಪತಿಯನ್ನು ಶಿವನ ಹಣೆಗಣ್ಣಿನಿಂದ ಜನಿಸಿದ ವೀರಭದ್ರನು ನಾಶ ಮಾಡಿದ ಕಥೆ ಇಲ್ಲಿದೆ. "ಪದ್ಯಗಳನ್ನು ಓದುವಾಗ ಒಂದು ಬಗೆಯ ಗತಿಯೂ, ಆವೇಶವೂ, ಸ್ಫೂರ್ತಿಯೂ ಉಂಟಾಗುತ್ತದೆ. ಮುಖ್ಯವಾಗಿ ಇದು ವೀರರಸ ದೇವತೆಯಾದ ವೀರಭದ್ರನಿಗೆ ಅನುಗುಣವಾದ ಶೈಲಿಯೆಂದು ಹೇಳಬಹುದು".[೬] ಸ್ಕಾಂದ ಪುರಾಣ, ಶಿವ ಪುರಾಣ, ಲಿಂಗ ಪುರಾಣ, ಭಾರತ ಭಾಗವತಾದಿ ಪುರಾಣಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಈ ಕಥೆಯನ್ನು ಕನ್ನಡದಲ್ಲಿ ಹರಿಹರ ನಂತರ ರಾಘವಾಂಕ ರಚಿಸಿದ್ದಾರೆ. ನಂತರದಲ್ಲಿ ವೀರಭದ್ರ ರಾಜನು (ಕ್ರಿ. ಶ ೧೫೨೦) ವೀರಭದ್ರ ವಿಜಯ ಗ್ರಂಥವನ್ನೂ ಚಂಪೂ ಶೈಲಿಯಲ್ಲಿ ರಚಿಸಿದ್ದಾನೆ. ವೀರರಸ ಪ್ರಧಾನವಾದ ರಾಘವಾಂಕನ ಈ ಕೃತಿಯು ಹರಿಹರನ ರಗಳೆಗಿಂತಲೂ ಸ್ವಾರಸ್ಯಕರವಾಗಿದೆ. ಕವಿ ಈ ಗ್ರಂಥಕ್ಕೆ 'ಮೀಸಲುಗವಿತೆ' ಎಂಬ ಹೆಸರನ್ನು ತಾನೇ ನೀಡಿದ್ದಾನೆ.

> ಮೃಡನೋಲಗದೊಳ್ ಮನ್ನಣೆ ಪಡೆಯದೆ ದಕ್ಷಂ
> ಕಡು ಮುಳಿಸಿಂ ಹರವಿರಹಿತ ಯಾಗವ ನಡೆಸಲ್
> ಘುಡುಘುಡಿಸುತ ನಡೆತಂದು ದಧೀಚಿವ್ರತಿ ಶಪಿಸಿದಮರರ ಮುನಿಗಳನು.

ಎಂದು ಕಾವ್ಯ ಪ್ರಾರಂಭವಾಗಿದೆ. ಶ್ರೀಪತಿ, ವಾಣೀಪತಿ, ಸುರಪತಿ, ಧನಪತಿ, ತಾರಾಪತಿ, ಮೊದಲಾದ ದೇವತೆಗಳನ್ನು ಆನತವೆನಿಸುವ ಶಿವನ ಕೋಪಾಟೋಪದಿಂದ ದಕ್ಷಾಧ್ವರವನ್ನು ವಿಧ್ವಂಸನಗೊಳಿಸಲು ವೀರೇಶನು ಜನಿಸಿದನು. ಪಂಪಾಪುರದರಸು ವಿರೂಪಾಕ್ಷ ಪ್ರೀತಿಯಿಂದ ಇಷ್ಟಾರ್ಥ ನೀಡಲಿ ಎಂದು ಬೇಡುತ್ತಾ ಕಾವ್ಯ ಮುಂದುವರೆದಿದೆ. ಶಿವನನ್ನು ಪರಿಣಾಮದ ಕಣಿ, ಶಾಂತಿಯನಿಧಿ, ಭಕ್ತಿಯ ಸಾಗರ, ಮೊದಲಾಗಿ ನಾನಾ ಪರಿಯಲ್ಲಿ ಸ್ತುತಿಸಿ ಮಂಗಳ ಉಂಟುಮಾಡಲಿ ಎಂದು ಪ್ರಾರ್ಥಿಸುತ್ತಾನೆ. ತನ್ನ ಕೃತಿಯನ್ನು ಕುರಿತು ರಾಘವಾಂಕ

> ಕೃತಿ ನಾಮಂ ವೀರೇಶ್ವರ ಚರಿತಂ ಬಗೆ ಗೀ

DOI: 10.59176

ಕೃತಿ ಪತಿಯೋರುಂಗಲ್ಲಿನ ವೀರೇಶ್ವರ ನೀ
ಕೃತಿಗೆ ಸಹಾಯರು ಸದ್ಭಕ್ತ ಸಮೂಹಂ ಕೃತಿಯಂ ಮುದದಿಂ
ಯತಿ ಪತಿ ಹಂಪೆಯ ಹರಿದೇವರ ಕಾರುಣ್ಯದ
ಸುತ ಶಿವಕವಿ ಭೃತ್ಯಂ ಹಂಪೆಯ ರಾಘವಪಂ
ಡಿತನೆನಲೀ ಕೃತಿಯಂ ಮೆಚ್ಚದ ಸಜ್ಜನರಾರೀ ವಸುಧಾಚಕ್ರದೊಳು ।

ಕ್ಷಿತಿಯಲ್ಲಿ ,ಶಿವಭಕ್ತರಿಗೆ, ಶಿವನಿಗೆ ಹೊರತು ಅನ್ಯ ದೇವರನ್ನು, ಅವನೀಶರನ್ನು, ಭವಿಗಳನ್ನು ಸ್ತುತಿಸಿದರೆ

ತುತಿಸದೆನಾದೊಡೆ ಸಲೆ ಶಿವದೂಷಕನಾನೆಂ
ಬತಿ ಬಿರುದಿನ ಶಿವಕವಿ ರಾಘವಪಂ
ಡಿತನೆನಲೀ ಮೀಸಲುಗವಿತೆಯ ಚಿತ್ತೈಸುವುದೆರಡರಿಯದ ನಿಚ್ಚಟರು.

ಕೈಲಾಸದ ವರ್ಣನೆಯನ್ನು ಕವಿ ಸುಂದರವಾಗಿ ಮಾಡುತ್ತಾನೆ. ಧರೆಯ ಶಿರೋಮಣಿಯಂತೆ ಶೋಭಿಸುವ ಸುರ ಗಿರಿಯನ್ನು ಏನೆಂದು ಬಣ್ಣಿಸುವುದು. ಚಂದ್ರ ಬಿಂಬದ ರಾಶಿಯೋ, ಬೆಳದಿಂಗಳೇ ಘನರೂಪ ತಾಳಿರುವುದೋ, ವಿಷಕಂಠನ ಕೀರ್ತಿಲತಾ ಕಂದವೋ, ಭಕ್ತರ ಭಾಗ್ಯದ ಹೆಬ್ಬೆಳೆಯೋ ಎಂಬಂತಿಹ ವಸುಧೆಗೆ ಅತಿ ಸಂತಸ ಉಂಟುಮಾಡುವ ಕೈಲಾಸದಲ್ಲಿ ಶರ್ವನ ವಾಸ. ಆ ಶಿವನ ಭವನವು ಅಗಣಿತ ರವಿ ಬಿಂಬಗಳ ಬೆಳಗನ್ನು ಬೀರುತ್ತಾ ಶೋಭಿಸುತ್ತಿತ್ತು. ನವಮಣಿಗಣಮಯ ಸಿಂಹಾಸನದಲ್ಲಿ ವಿರಾಜಿಸಿದ ಶಿವನು ಎಲ್ಲರ ಬಯಕೆ ಸಲ್ಲಿಸುತ್ತಾ ಕಲ್ಪದ್ರುಮನೆನಿಸಿ, ದೇವತೆಗಳು ಹೊಗಳುತ್ತಿರಲು ಮಂಗಳ ದರ್ಪಣದಂತೆ ವಿರಾಜಿಸುತ್ತಿದ್ದನು. ಸಕಲ ದೇವತೆಗಳಿಂದ ಸ್ತುತಿಸಿಕೊಳ್ಳುತ್ತ ಆ ಸಭೆಯಲ್ಲಿ ಶಿವನು ಬೆಳಗುತ್ತಿದ್ದನು.

ಏಳಂಬುಧಿ ಪರಿವೃತದ ಧರಾತಳದೊಳಗೆ ನೃ
ಪಾಲರುಗಳನವರಿವರೆಂದೆನ್ನದೆ ನೆರೆ ನಿ
ರ್ಮೂಲಂ ಗೆಯ್ದಿಸುವೆನ್ನಿಂ ನಿಜವಿಜಯ ಭುಜಾದಂಡವ ಮಂಡಿಸಿ ಮೆರೆದಾ
ಬಾಲ ಬಲಾಢ್ಯತೆಯಿಂ ತೋರಿಸಿ ನಾನಾ ಭವ
ನಾಳಿಯ ದೇವರ ಕೆಯ್ಯಭಿಷೇಕ ಪಯಃಕಣ
ಜಾಳದ ಜಯ ಸೇಸೆಯ ತೋರುವೆನೆದನುಗೆಯ್ದಂ ದಕ್ಷ ಪಿತಾಮಹನು.

ಭಾರತಿಯ ವೀಣಾನಾದ, ತುಂಬುರು ನಾರದರ, ನಂದಿ ಮಹಾಕಾಳರ ಪೂರಾಯದ ಗತಿ, ರಂಭೆಯ ಕೇಳಿಕೆ, ಭೃಂಗಿಯ ನೃತ್ಯ, ಬ್ರಹ್ಮನ ವೇದಪಠನೆ ಮೊದಲಾದವುಗಳನ್ನು ಆಲಿಸುತ್ತಾ ಭವದೂರನೂ ಸುಖಸಾರನೂ ಮಹಿಮೆಗೆ ಆಗರನೂ ಆದ ಶಿವನು ಮೆರೆಯುತ್ತಿದ್ದನು. ಬ್ರಹ್ಮ, ವಿಷ್ಣು, ಸೂರ್ಯ, ಚಂದ್ರ ಮೊದಲಾದ ದೇವತೆಗಳ ಲೋಕಗಳಲ್ಲಿ ಸಂಚರಿಸಿ ಅವರಿಂದ ಸನ್ಮಾನ, ವಂದನೆ, ಉಡುಗೊರೆ ಅಕ್ಷತೆ ಕೈಗೊಂಡು 'ಸುರಪರಿವೃತ' ಪರಮನನ್ನು ನಮಸ್ಕರಿಸುವಂತೆ ಮಾಡುವೆನೆಂಬ ಆಸಕ್ತಿಯಿಂದ ದಕ್ಷನು ಆ ಸಭೆಗೆ ಬಂದನು.

DOI: 10.59176
http://www.kristujayantijournal.com/index.php/KJKSP

ಸಕಲ ದೇವತೆಗೂ ನಮಸ್ಕರಿಸುವ ದೇವರ ದೇವನಿಗೆ ಎರಗದೆ, ವೇಗಳಿಂದ ಸ್ತುತ್ಯನಾದ ಶಿವನನ್ನು ಸ್ತುತಿಸದೆ ಮುನಿಗಳು ತಮ್ಮ ಚಿತ್ತದ ಕಂಗಳಲ್ಲಿ ನೋಡುವವನನ್ನು ಕಾಣಲಾಗದೆ. ಗರ್ವಾವಿಷ್ಟನಾಗಿ ಶಿವನೇ ತನಗೆ ವಂದಿಸಲೆಂಬ ಅಹಂ ತೋರಿದನು. ಅದನ್ನು ರಾಘವಾಂಕ 'ಕೆಂಡದ ತೊಡಿಗೆಗೆ ಮನವಿಟ್ಟ ಅರಗಿನ ಪುತ್ಥಳಿಯಂತೆ' ಎಂದಿದ್ದಾನೆ. ಕಂಡರೂ ಕಾಣದಂತೆ ವರ್ತಿಸಿದ ದಕ್ಷನ ಮನವನ್ನು ಶಿವ ತಿಳಿಯನೇ? ಪತಿಗೆ ಅಹಿತವನ್ನುಂಟುಮಾಡಿದ ತಂದೆಯನ್ನು ಕಂಡ ದಾಕ್ಷಾಯಿಣಿಯು ಮೌನವಾಗಿ ನಿಂತಳೂ ದಕ್ಷನು ಅಲ್ಲಿ ನೆರೆದಿದ್ದವರಿಂದ ವಂದನೆ ಸ್ವೀಕರಿಸಿ ನಿಂತನು. ಇಡೀ ಸಭೆಯು ದಕ್ಷನು ಪಾತಕವನ್ನು ಮಾಡಿದನು, ಶಿವ ಶಿವೆಯರು ಇವನನ್ನು ಏಕೆ ಮನ್ನಿಸಿದರೋ ಎಂದು ಚಿಂತೆಗೊಳಗಾಯಿತು. ಮುಂದಾಗುವುದನ್ನು ಅರಿಯದ ದಕ್ಷನು ಮಂತ್ರಾಲೋಚನ ಗೃಹಕ್ಕೆ ಕೋಪಾವೇಷದಿಂದ ಬರುತ್ತಿದ್ದನು.

ಕರೆಗಟ್ಟಿದ ಬಿರುಗೋಪದ ಮರಹಿಂದಂ ಮುಂ
ದರಿಯದೆ ಪೊರಮಟ್ಟೆನೆನುತಂ ತನ್ನ ತಾಂ
ಹುರುಗುಟ್ಟಿ ಕೊಳುತ್ತಂ ಪೆರರ ಧನಿಯಾದರೆ ಕರೆಯಲರಾ ಎಂದೆನುತ
ಕಿರಿದೆಡೆಯಂ ನಡವುತ್ತಂ ನಿಂದಿರುತಂ ಕುರು
ಕುರು ಮೆಟ್ಟುತ ಬರ್ಪವರಂ ಮಿಗೆ ಬಗೆವುತ್ತಂ
ನೆರೆ ಸುಯಿವೃತ್ತಂ ಬೈವುತ್ತಂ ಜಿನುಗತ್ತಂ ನಡೆದ ಪಾಪಾತುರನು.

ಎಲ್ಲ ಭೂಪಾಲರನ್ನು ತನ್ನ ವಶ ಮಾಡಿಕೊಂಡು, ಅಮರಗಣಗಳಿಂದ ವಂದಿತನಾಗಿ ಉಬ್ಬಿ, ತನ್ನ ಅದಟನ್ನು ನೆನೆಯುತ್ತಾ ತನ್ನ ಭವನಕ್ಕೆ ಹಿದಿರುಗಿದನು. ಜನ್ನ (ಯಜ್ಞ) ಮಾಡಿ ಶಿವನ ದೇವತ್ವವನ್ನು ಸುಟ್ಟು ಬನ್ನ ಬಡಿಸುವೆನು. ತನ್ನಂತಹವನನ್ನು ನಿರ್ಲಕ್ಷಿಸಿದ ಶಿವನನ್ನು ಪರಿಭವಿಸುವೆನು. ತನ್ನ ಮಾತನ್ನು ಕೇಳದ ಅಮರರ ತಲೆಗಡಿವೆನು ಎಂದು ಪಾತಕ ದಕ್ಷ ತೊಡೆ ತಟ್ಟಿದನು. ತನ್ನ ಮಂತ್ರಿ ವಿದಗ್ಧನನ್ನು ಕರೆಸಿ, ಮಂತ್ರಾಲೋಚನೆ ನಡೆಸಿ ತನಗೆ ಉಂಟಾದ ಪರಿಭವಕ್ಕೆ ತಕ್ಕ ಶಾಸ್ತಿಯಾಗುವಂತೆ ಸರ್ವೋತ್ತಮನೆಂದು ಕರೆಸಿಕೊಳ್ಳುವ ಶಿವನಿಗೆ ಅವಮಾನ ಮಾಡಬಲ್ಲ ಮಹಾಯಾಗವನ್ನು ಮಾಡಲು ಆಲೋಚಿಸಿ ಅದಕ್ಕೆ ಬೇಕಾದುದನ್ನೆಲ್ಲ ತರಿಸ ಹೇಳಿದನು. ಅದಕ್ಕೆ ಮಂತ್ರಿಯು ಶಿವನು ಒಲಿದರೆ ಯಾಗಸಹಸ್ರದ ಫಲ ನೀಡಬಲ್ಲ. ಅದೇಕೆ ಇಂತಹ ಕಾರ್ಯಕ್ಕೆ ಮನಸ್ಸು ಮಾಡಿದೆ ಎಂದು ಪ್ರಶ್ನಿಸಿದನು.

ವಸಿಷ್ಠರು ಮುನಿದು ಶಾಪಿಸಿದ ಕೌಶಿಕನ ತಂದೆ ತ್ರಿಶಂಕುವನ್ನು ಸ್ವರ್ಗಕ್ಕೆ ಕಳುಹಲು ಕೌಶಿಕ ಮುನಿ ಪ್ರತಿ ಸ್ವರ್ಗ ಸೃಷ್ಟಿಸಿದಂತೆ, ತಾನೂ ಯಜ್ಞಮಾಡಿ ಬೇಕಾದುದನ್ನು ಪಡೆಯುವೆನೆಂಬ ಅಹಂಕಾರದಿಂದ ದಕ್ಷನು ನುಡಿದ ನುಡಿಗೆ ಮಂತ್ರಿಗಳು ರುದ್ರನೊಂದಿಗೆ ಹಠ ಬೇಡವೆಂದು ಪರಿಪರಿಯಾಗಿ ಹೇಳುತ್ತಾರೆ. ಸತೀದೇವಿಯೂ ಇದರಿಂದ ನೊಂದು ಮುನಿಯಳೇ ಎಂದು ಕೇಳಿದಾಗ ತನ್ನ ಮನಸ್ಸಿನ ಬಂದುದನ್ನೇ ಮಾಡುವೆನೆಂಬ ಜಿದ್ದಿನಿಂದ ಯಜ್ಞಕ್ಕೆ ಉಪಕ್ರಮಿಸಿದನು.

ಗಣಗಳು ಪ್ರವೇಶಿಸದ ಕಡೆ ಕಾಶಿಗೆ ಪೂರ್ವದಿಕ್ಕಿನ ರಮ್ಯಾಶ್ರಮದಲ್ಲಿ ಕನಖಳವೆಂಬ ಪುರದಲ್ಲಿ ಷೋಡಶ ಋತ್ವಿಜರು, ಯಜ್ಞಕ್ಕೆ ಕಮಲಾಕ್ಷನನ್ನು ಒಡೆಯನನ್ನಾಗಿಸಿ, ದಿಕ್ಪಾಲಕರನ್ನು ಯಜ್ಞ ರಕ್ಷಕರನ್ನಾಗಿಸಿ ಶಿವವಿರಹಿತ ಯಜ್ಞಕ್ಕೆ ಬಾರದವರನ್ನು ಮುನಿದು ಕೊಂದಿಕ್ಕುವ ಮಾತಾಡುತ್ತಾನೆ. ಯಜ್ಞಕ್ಕೆ ಬರಲು ಆಹ್ವಾನವನ್ನು

ಹರಿಯಲ್ಲಿಗೆ, ವಾಣೀಶ್ವರನಲ್ಲಿಗೆ ದಿಗಧೀ
ಶ್ವರನಲ್ಲಿಗೆ ಸರ್ವಾಮರರಲ್ಲಿಗೆ ವಿದ್ಯಾ
ಧರನಲ್ಲಿಗೆ, ನೆರೆ ಕಿನ್ನರರಲ್ಲಿಗೆ ಸಲೆ ಖೇಚರರಲ್ಲಿಗೆ ಮನ್ನಣೆಯ
ಗರುಡೋರಗ ಗುಹ್ಯಕ ಗಂಧರ್ವ ಮರುದ್ಗಣ
ತುರಗಾನನ ಮುಖ್ಯರ್ ಮತ್ತವರಿವರೆನ್ನದೆ
ಬರೆಬರೆದಟ್ಟಿದನಿಂದೇ  ಬರ ಬೇಕೆಂದೋಲೆಗಳಂ ಪಾಪಾಸುರನು

ಕಾಶಿಯ ಪೂರ್ವದ ರಮ್ಯವಾದ ಆಸ್ರಮದ ಕನಖಳವೆಂಬ ಪುರದಲ್ಲಿ ಯಜ್ಞಕ್ಕೆ ಸಕಲಸಿದ್ಧತೆಗಳಾದವು. ಯಜ್ಞಕುಂಡ, ಯೂಪಸ್ಥಂಭ ಎಲ್ಲವೂ ಅನುವಾದವು. ದಿಕ್ಪಾಲಕರಿಗೆ ಯಜ್ಞ ರಕ್ಷಣೆಯ ಭಾರ ಹೊರಿಸಿದನು. ಯಜ್ಞ ಪ್ರಾರಂಭಿಸಲು ಅನುಮತಿ ಬೇಡಲು ಎಲ್ಲಾ ಮುನಿಗಳು ಬಂದಿರುವರೇ ಎಂದು ನೋಡಿದಾಗ ದಧೀಚಿ ಮಹರ್ಷಿ ಬಂದಿಲ್ಲವೆಂಬ ವಿಚಾರ ತಿಳಿಯಿತು. ಅವರನ್ನು ಕರೆತರಲು ಚಾರರನ್ನು ಅಟ್ಟಿದನು. ಪಂಪಾಧೀಶನ ಮುಂದಿನ ತೀರ್ಥದ ತಡಿಯ ತಪೋವನದಲ್ಲಿ ಇದ್ದ ದಧೀಚಿಯು ಎಲ್ಲಾ ಮುನೀಶ್ವರರೂ ಯಾಗ ಮಂಟಪದಲ್ಲಿ ಇರುವುದನ್ನು ತಿಳಿದಾಗ ಪುಳಕದಿಂದ ಯಾಗ ಮಂಟಪಕ್ಕೆ ಬಂದನು. ದಧೀಚಿ ಮುನಿಯು ಪುರಾಂತಕನೆಲ್ಲಿ ಎನ್ನಲು, ದಕ್ಷನು ಶಿವನು ಈ ಯಾಗದಲ್ಲಿರಲು ಅಯೋಗ್ಯನೆಂಬ ಮಾತನ್ನಾಡಿದನು.

ಇಲ್ಲಿ ರಾಘವಾಂಕ ಅಳಿಯ ಪದವನ್ನು ಬಗೆ ಬಗೆಯ ಅರ್ಥಗಳಲ್ಲಿ ಬಳಸುತ್ತಾನೆ. ಶಿವನನ್ನು ಕುರಿತು ಹರಿಯಜ ಸುರರ ಅಳಿಯಂತಳಿಯಂ, ಈ ಅಧ್ವರ ಅಳಿದರೂ ಅವನು ಅಳಿಯನು, ದಕ್ಷನು ಅಳಿದರೂ ಅಳಿಯನು ಶರಣೆಂದವರನ್ನು ಅಳಿಯನು (ನಾಶ ಮಾಡಲು ಬಿಡನು ) ಮಲೆತವರನ್ನು ಬಿಡದೆ ಅಳಿವಂ ಎಂದು ಕಡು ಕೋಪದಿಂದ ದಧೀಚಿ ಮುನಿಯು ಶಿವನ ನಿಂದೆಯನ್ನು ಸಹಿಸಲಾಗದೆ ದಕ್ಷ ಯಜ್ಞ ಮತ್ತು  ಅದಕ್ಕೆ ನೆರೆದ ಎಲ್ಲರಿಗೂ ಶಾಪ ನೀಡಿ ಹೊರ ನಡೆಯುತ್ತಾನೆ. ವಸಿಷ್ಠ, ಅಗಸ್ತ್ಯ ಭೃಗು, ಗೌತಮ, ಮೊದಲಾದ ಮುನೀಶ್ವರರು ಶಿವನಿಲ್ಲದ ಜನ್ನವೆಂದು ತಿಳಿದು ತಾವೂ ದಧೀಚಿಯೊಡನೆ ಹೊರಟು ಹೋಗುತ್ತಾರೆ.  ಇಂತಹ ಸಂದರ್ಭದಲ್ಲೂ ದಕ್ಷನು ತಾನೇ ಯಜ್ಞವನ್ನು ಆರಂಭಿಸಿಬಿಟ್ಟನು.

ನಾರದನು ಇತ್ತ ಕೈಲಾಸಕ್ಕೆ ಬಂದು ದಧೀಚಿ ಮುನಿಯು ಎಲ್ಲರಿಗೂ ಶಾಪನೀಡಿ ಅಲ್ಲಿಂದ ಹೊರಬಂದ ವಿಚಾರ ತಿಳಿಸಿದನು. ಸತಿಯು ಶಿವನನ್ನು ನಿಂದಿಸಿದ ದಕ್ಷನಲ್ಲಿ ತಾನು ನ್ಯಾಯ ಕೇಳಲು ಹೊರಟು, ಅಪ್ಪಣೆ ಬೇಡಿದಳು. ನಾನಾಪರಿಯಲ್ಲಿ ಶಿವ ಬೇಡವೆಂದರೂ ಆಕೆ ಹೊರಟು ನಿಂತಳು. ಅವಳ ಕಾವಲಿಗೆ ಶಿವನು ಗಣಗಳನ್ನು ಕಳುಹಿದನು. ದಕ್ಷ  ಯಜ್ಞಕ್ಕೆ ಬಂದ ಸತಿ ತಂದೆಯೊಡನೆ ಶಿವನ ಮಹತ್ತಿನ ಕುರಿತು ವಾದಿಸಿದಳು. ಅದನ್ನು ಗಮನಿಸದೆ, ಅವಳ ಮುಖವನ್ನೂ ನೋಡದೆ ದಕ್ಷನು ಶಿವೆಯನ್ನು ಅವಮಾನಿಸಿದನು. ಶಿವನಿಂದೆ ಸಹಿಸಲಾಗದೆ ತುರುಣೇಂದುಧರನ ಸತಿಯು ಯಜ್ಞ ಕುಂಡಕ್ಕೆ ಹಾರಿಬಿಟ್ಟಳು. ಇದನ್ನು ತನ್ನ ಗಣಗಳಿಂದ ತಿಳಿದ ಶಿವನ ರೌದ್ರರೂಪವನ್ನು ಕೋಪಾಟೋಪವನ್ನು ಯಾರು ಬಣ್ಣಿಸಲು ಸಾಧ್ಯ ಎಂಬಲ್ಲಿಗೆ ೧ನೇ ಸಂಧಿ ಮುಗಿದಿದೆ.

೨ನೇ ಸಂಧಿಯಲ್ಲಿ ವೀರಭದ್ರನ ಜನನ, ದಕ್ಷ ಯಜ್ಞ ವಿನಾಶದ ಕಥೆಯಿದೆ. ರುದ್ರನ ನೊಸಲಗಣ್ಣಿನ ಕಿಡಿಯಿಂದ ವೀರಭದ್ರ ಜನಿಸಿದನು. ಕಿಚ್ಚಿನ ಮುಚ್ಚಳ ತೆಗೆದಂತೆ ತೆರೆವ ಹಣೆಗಣ್ಣಿನ ಕಿಡಿಯಿಂದ ಗಗನವೇ ಬಿಸಿಬಿಸಿಯೇರಿ ಕಾದು ಹೋಯಿತು. ಶಶಿಯ ಮುಖದಲ್ಲಿ ಬೆವರಿಳಿಯುವಂತಾಯ್ತು. ವೀರಭದ್ರನು ಹಾರಿದ ರಭಸಕ್ಕೆ ಭೂಮಿ ಬಿರಿಯಿತು. ಶೇಷನ ಹೆಡೆ ಮುರಿಯಿತು. ಆವನನ್ನು ಕಂಡ ಶಿವನು ತಾನೇ ಬೆರಗಾದನು. ಅವನ ರೂಪವನ್ನು

ಸೊಡರ್ಗುಳಿವೆಳಗಿನ ಮೈವಣ್ಣಂ ನಿಡುಜಡೆ ಮುಡಿ
ನಡುನೆತ್ತಿಯಲಿಂಗಂ ಮುಕುಟಂ ಫಣಿ ಕುಂಡಲ
ಕುಡಿಗಣ್ಣುಂಗೆದರುವ ಪಂಚಮುಖಂ ನಿಡುದಾಡಗಳೆಸೆವ ಸಹಸ್ರಭುಜಂ
ಉಡುಗೆಯ ಚಲ್ಲಣಕಿಗಟ್ಟಿನ ಭೀಳಾಯುಧ
ಬಿಡುವ ಶಿರೋಮಾಲಾಭರಣಗಳೆಂ ಬಗ್ಗದ
ತೊಡವಹಿತರ ಹಾಹೆಗಳೆಳೆಯಲು ವೀರೇಶನ ನಿಲವಾರಂ ನಡುಗಿಸದು.

“ಮಲೆ ತೊಡೆ ಕೊಲು ಶರಣೆಗೆ ಕಾಯು” ಎಂದ ಶಂಕರನ ಆಜ್ಞೆಗೆ ಬಲಗೊಂಡು ಚಂಡಾಂಶು ಶತಪ್ರಭನಾದ ವೀರಭದ್ರನು ದಕ್ಷಧ್ವರ ಶಾಲೆಗೆ ಹೊರಟನು. ಕುಲಗಿರಿಗಳ ಕೈಗೊಂಡು, ಬ್ರಹ್ಮಾಂಡಗಳ ಹೊಡೆಸೆಂಡು, ಮಹಾಕಾಲನ ಕೋಣದ ಕೋಲಿನ ಬಡಿಗೆ ಆಕಾಶ ಭೂಮಿಯನ್ನೇ ಅದಲು ಬದಲಾಗಿಸುವಂತೆ ಗಣಕುಲ ವೀರೇಶನ ಜೊತೆಗೆ ಹೊರಟಿತು. ವೀರಭದ್ರನ ಸೇನೆಯನ್ನು ಕಂಡ ನಾರದರಿಗೆ ಯಜ್ಞದಲ್ಲಿನ ಸುರರೆಲ್ಲರನ್ನೂ ಈತ ಕೊಲ್ಲುವನೆಂಬ ಭಯ ಉಂಟಾಯಿತು. ಯಾಗಶಾಲೆಗೆ ಬಂದು ಸಕಲ ಸುರರಿಗೆ ಎಚ್ಚರಿಕೆ ನೀಡಿದರು.

ಯಜ್ಞಸಾಲೆಗೆ ಬಂದ ವೀರಭ್ರನ ಪರಿವಾರವು ಕೋಲಾಹಲವುಂಟುಮಾಡಿತು. ಕಾಲನ ತೋಳು ಕಡಿಯಿತು, ಪೂಷನ ಹಲ್ಲು ಮುರಿಯಿತು, ಸುರೆಲ್ಲರು ಮಡಿದರು, ಮಖಶಾಲೆಯನ್ನು ಸುಟ್ಟರು, ಅನಲನ ನಾಲಗೆ ಕಿತ್ತನು, ವೀರಭದ್ರನು ಅಲ್ಲಿದ್ದ ಸ್ತ್ರೀಯರನ್ನು ಸೆರೆ ಹಿಡಿದನು, ದಕ್ಷನ ತಲೆಕಡಿದನು ವೀರಭದ್ರ. ಹೀಗೆ ದಧೀಚಿ ನೀಡಿದ ಶಾಪ ಫಲಿಸಿತು. ದಕ್ಷಯಜ್ಞವನ್ನು ನಾಶ ಮಾಡಿ ಕೈಲಾಸಕ್ಕೆ ಮರಳಿದ ವೀರಭದ್ರನನ್ನು ಮಾರಿ, ಮೃತ್ಯು, ಶಾಕಿನಿ, ಡಾಕಿನಿ, ಬೇತಾಳರು ಹೊಗಳುತ್ತಿರಲು ಅವರನ್ನು ನೋಡುತ್ತಾ ನಗುತ್ತಾ ನಡೆದನು ವೀರೇಶ್ವರ. ಶಿವನ ಮುಂದೆ

ಘನ ಯಜ್ಞನ ಶಿರವಿದು ದಕ್ಷನ ತಲೆಯಿದು ಕಾ
ಲನ ತೋಳಿದು ಭಗಲೋಚನವಿದು ಪೂಷಾದಿ
ತ್ಯದ ಹಲ್ಲಿದು ವಾಣಿಯ ಮೂಗಿದು ಮೃಗದೊಗಲಿದು ಗದೆಯಿದು ಹೊಸಚಕ್ರವಿದು

ಅನಲನ ನಾಲಿಗೆಯಿದು, ಸುರಪತಿ ಮುಖ್ಯರ ವಾ
ಹನವಿವು ಮಂಡನ ಶಸ್ತ್ರಾಸ್ತ್ರಾವಳಿಯಿವು ಸ
ನ್ಮುನಿಗಳ ಸೃಕ್ ಸ್ರುವವಿವು ಚಿತ್ತೈಸೆಂದೊಪ್ಪಿಸಿದರು ವೀರನ ಕಿಂಕರರು.

DOI: 10.59176
http://www.kristujayantijournal.com/index.php/KJKSP

ಕರುಣಾಕರನಾದ ಶಿವನು ಹಿಂದೆ ನಿಂದಿಸಿದ ದೋಷವನ್ನು ಮನ್ನಿಸಿ ದಕ್ಷನಿಗೆ ಹೋತದ ತಲೆಯಿತ್ತು ಜೀವಂತಗೊಳಿಸಿದನು. ಸುರರೆಲ್ಲರಿಗೆ ಅಭಯ ನೀಡಿದನು. ದಕ್ಷನು ನಂತರ ಶಿವನನ್ನು ಕೀರ್ತಿಸಲು ವರ ಬೇಡೆಂದನು. ಕ್ರತುಫಲ ಬೇಡಿದಾಗ ಶತಯಜ್ಞದ ಫಲಗಳನ್ನು ಕೊಟ್ಟು ಹರಸಿದನು.

ರಾಘವಾಂಕನು ಕನ್ನಡ – ಸಂಸ್ಕೃತ ಬೆರೆತ ಶೈಲಿಯನ್ನು ಅನುಸರಿಸಿದ್ದಾನೆ. ಇವನ ಕೃತಿಗಳಲ್ಲಿ ದೃಷ್ಟಾಂತ, ಸ್ವಭಾವೋಕ್ತಿ ಉಪಮೆ, ಶಬ್ದಾಲಂಕಾರಗಳು ಹೆಚ್ಚಾಗಿವೆ. ಇದರಲ್ಲಿ ಬರುವ ದಕ್ಷ–ದಧೀಚಿ ಸಂವಾದ ಹಾಗೂ ವಿದಗ್ಧಮಂತ್ರಿ–ದಕ್ಷ ಸಂವಾದದಲ್ಲಿ ನಾಟಕೀಯತೆ ಮೆರೆದಿದೆ.

**ಅಲಂಕಾರಗಳು:** ರಾಘವಾಂಕನು ಬಳಸಿರುವ ಉಪಮೆಗಳಿಗೆ ಉದಾಹರಣೆ

- ಕೆಂಡದ ತೊಡಿಗೆಗೆ ಮನವಿಟ್ಟರಗಿನ ಪುತ್ತಳಿಯಂತೆ
- ಧರಣೀಶನ ಮುಕುಟದ ಮುತ್ತು ತಾಂ ಜನಿಸಿದ ಸಂಪಂ ಕಂಡಂತೆ
- ಸೊಕ್ಕಿದ ಕರಿ ಕೊಳನಂ ಪೊಕ್ಕಂತೆ (ಸಂ ೧ ಪ ೫೮)
- ಸುಟ್ಟುದ ಸುಡುವಂತೆ (ಸಂ ೧ ಪ ೬೫)
- ನಂಜಿನ ಹುತ್ತಿಂದಂ ತಳರ್ದ ರೌದ್ರೋರಗ ಸಂಕುಳದಂತೆ (ಸಂ ೨ ಪ ೭)

**ಶಬ್ದಾಲಂಕಾರ**

- ನಡೆನಡೆ ಸುರಪತಿ ನಡೆನಡೆ ಶಿಖಿ ನಡೆನಡೆ ಯಮ
  ನಡೆನಡೆ ಖಳ ನಡೆನಡೆ ಜಳಧಿತ ನಡೆನಡೆ ಹರಿ
  ನಡೆನಡೆ ಧನಿನಡೆ ದಿನಮಣಿನಡೆ ನಡೆನಡೆ ಮಾಳವಯಾ ಸಕಲಾಸುರರು

- ಚೂಣಿಯ ಹೂಣಿಗರಂ ಮಾಣದೆ ಕಾಣಿಸೆ ಹುಲಿ
  ಗೋಣನ ತೂಣನ ತೋಳಂ ತುಂಡಿಸಿ ಪೂಷನ
  ಕೋಣೆಯ ಹಲ್ಲೆಲ್ಲವ ಘಲ್ಲಿಸಿ ಭಗದಿನಪದನ ಕಣ್ಣಂ ಮಣ್ಗೋಳು ನೆರಹಿ.

ಇದಲ್ಲದೆ ಈತನ ಕಾವ್ಯದಲ್ಲಿ ಆಗಿನ ಕಾಲದ ಜನ ಬಳಕೆಯ ನಾಣ್ಣುಡಿಗಳು ಹೆಚ್ಚಾಗಿ ಬಂದಿವೆ. ದೇಸಿಯ ಬೆಡಗು ಇಲ್ಲಿ ಕಾಣಬಹುದು. ರಾಘವಾಂಕನಿಗೆ ಕೇವಲ ಪಂಡಿತರನ್ನು ಮೆಚ್ಚಿಸಲು ಕಾವ್ಯ ರಚಿಸಲಿಲ್ಲ. ಜನಸಾಮಾನ್ಯರಿಗಾಗಿ ಕೃತಿ ರಚನೆ ಮಾಡಿದನು.

**ಉಪಸಂಹಾರ:**

ರಾಘವಾಂಕನು ಕವಿಯೂ, ಪವಾಡ ಪುರುಷನೂ ಆಗಿದ್ದನೆಂದು ತಿಳಿದು ಬರುತ್ತದೆ. ರಾಘವಾಂಕನ ಕುರಿತು ರಾಘವಾಂಕ ಚರಿತ್ರ (ಕ್ರಿ..ಶ ೧೬೫೦), ಚೆನ್ನಬಸವ ಪುರಾಣ (ಕ್ರಿ..ಶ ೧೫೮೪), ಭೈರವವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ (ಕ್ರಿ..ಶ ೧೬೭೨), ಗುರುರಾಜ ಚರಿತ್ರ (ಕ್ರಿ..ಶ ೧೬೫೦), ಮೊದಲಾದ ಗ್ರಂಥಗಳಲ್ಲಿ ಹಲವಾರು ಸ್ವಾರಸ್ಯಕರ ವಿಷಯಗಳು ನಿರೂಪಿವಾಗಿವೆ. ಕವಿ ಚಕ್ರವರ್ತಿ ಹರಿಹರನ ಶಿಷ್ಯನಾಗಿ, ಹಂಪೆಯಾಳ್ದನ ಸಾನಿಧ್ಯ ಪಡೆದು, ಗುರು ಕೆರೆಯ ಪದ್ಮರಸನ ಪ್ರೀತಿಗೆ ಪಾತ್ರನಾದವನು. ಹಲವಾರು ರಾಜರ ಆಸ್ಥಾನಗಳಲ್ಲಿ ದಿಗ್ವಿಜಯಿಯಾಗಿ ಖ್ಯಾತಿ ಪಡೆದಿದ್ದಾನೆ. ಆಜನ್ಮ ಪರ್ಯಂತ ನೈಷ್ಠಿಕ ಬ್ರಹ್ಮಚಾರಿಯಾಗಿದ್ದವನು ರಾಘವಾಂಕ. ಕೊನೆಗೆ ಬೇಲೂರಿನಲ್ಲಿ ಪದ್ಮರಸನ ಸನ್ನಿಧಿಯಲ್ಲಿ ಜೀವಂತ ಸಮಾಧಿ ಪಡೆದನೆಂಬ ಮಾಹಿತಿ ದೊರೆಯುತ್ತದೆ. ಹರೀಶ್ವರನ ವರಸುತನಾದ ರಾಘವ ಪಂಡಿತನು ಕನ್ನಡ ಸಾಹಿತ್ಯ ಸೇವೆ ಹಾಗೂ ಶಿವ ಭಕ್ತಿಯ ಪ್ರಸಾರವನ್ನು ಮಾಡಲು ತನ್ನ ಆಯುಷ್ಯವನ್ನು ಮೀಸಲಿರಿಸಿದನು. ಷಟ್ಪದಿಗಳನ್ನು ಹೆಚ್ಚು ಬಳಕೆಗೆ ತಂದು ಮಾರ್ಗ ನಿರ್ಮಿಸಿದ ರಾಘವಾಂಕನಿಂದ ಪ್ರೇರಿತರಾದ ಹಲವಾರು ಕವಿಗಳು ಷಟ್ಪದಿಗಳಲ್ಲಿ ಕಾವ್ಯ ರಚನೆ ಮಾಡಿದ್ದಾರೆ. ಇಂತಹ ರಾಘವಾಂಕನ ಸ್ಥಾನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಉನ್ನತವೂ, ಶಾಶ್ವತವೂ ಆದುದಾಗಿದೆ.

**ಅಡಿ ಟಿಪ್ಪಣಿ:**

೧. ಬಿ. ಶಿವಮೂರ್ತಿಶಾಸ್ತ್ರಿ, ವೀರೇಶ ಚರಿತೆ, ಶರಣಸಾಹಿತ್ಯ ಗ್ರಂಥಮಾಲಾ-೩ (೧೯೭೬) ಪುಟ ೩

೨. ಟಿ. ಎಸ್. ವೆಂಕಣ್ಣಯ್ಯ, ಎ ಆರ್ ಕೃಷ್ಣಶಾಸ್ತ್ರಿ, ಹರಿಶ್ಚಂದ್ರ ಕಾವ್ಯ ಸಂಗ್ರಹ, ಪೀಠಿಕೆ, ಪ್ರಸಾರಾಂಗ., ಮೈ ವಿ. ವಿ ಪುಟ ೫೪

೩. ಟಿ. ವಿ. ವೆಂಕಟಾಚಲ ಶಾಸ್ತ್ರಿ, ಕನ್ನಡ ಛಂದಸ್ಸಿನ ಚರಿತ್ರೆ, ಮೈ ವಿ. ವಿ ೧೯೮೦ ಪುಟ ೧೫೨

೪. ಅದೇ ಪುಟ ೨೦೪

೫. ಅದೇ ಪುಟ ೨೦೪

೬. ಡಿ. ಎಸ್. ಕರ್ಕಿ, ಕನ್ನಡ ಛಂದೋವಿಕಾಸ, ೧೯೭೦., ಪುಟ ೧೯೫

೭. ಬಿ. ಶಿವಮೂರ್ತಿಶಾಸ್ತ್ರಿ, ವೀರೇಶ ಚರಿತೆ ಶರಣಸಾಹಿತ್ಯ ಗ್ರಂಥಮಾಲಾ-೩., ಪುಟ ೩

**ಪರಾಮರ್ಶನ ಗ್ರಂಥಗಳು:**

೧. ಚೆನ್ನಬಸವ ಪುರಾಣ., ವಿರೂಪಾಕ್ಷ ಪಂಡಿತ., ಕನ್ನಡ ಸಾಹಿತ್ಯ ಪರಿಷತ್ತು., ೧೯೭೭

೨. ಹರಿಶ್ಚಂದ್ರ ಕಾವ್ಯ ಸಂಗ್ರಹ ಟಿ. ಎಸ್. ವೆಂಕಣ್ಣಯ್ಯ, ಎ ಆರ್ ಕೃಷ್ಣಶಾಸ್ತ್ರಿ, ಮೈಸೂರು ವಿಶ್ವ ವಿದ್ಯಾಲಯ ೧೯೭೨

೩. ಸಿದ್ಧ ನಂಜೇಶನ ಗುರುರಾಜ ಚಾರಿತ್ರ., ನಂ ಕೆ ಭೂಸನೂರಮಠ ಮುರುಘಾ ಮಠ., ೧೯೫೦

೪. ವೀರೇಶ ಚರಿತೆ, ಬಿ. ಶಿವಮೂರ್ತಿಶಾಸ್ತ್ರಿ, ಶರಣ ಸಾಹಿತ್ಯ ಗ್ರಂಥಮಾಲಾ, ಮುರುಘಾ ಮಠ:, ೧೯೭೬